**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್.ಸಿ.ನಂ.273/2023**

ಪಿರ್ಯಾದುದಾರರು : ಸರ್ಕಾರದ ಪರ ಆವಲಹಳ್ಳಿ ಪೊಲೀಸರು

- ವಿರುದ್ಧ -

ಆರೋಪಿಗಳು :

1. ನಾಗಮ್ಮ,
ಗಂಡ: ದೇವರಾಜು,
ವಯಸ್ಸು 40 ವರ್ಷ.

2. ಕವಿತ,
ತಂದೆ: ತಿಮ್ಮಯ್ಯ,
ವಯಸ್ಸು 45 ವರ್ಷ.

3. ಜಯಮ್ಮ,
ತಂದೆ: ನಾರಾಯಣಪ್ಪ,
ವಯಸ್ಸು 64 ವರ್ಷ.

4. ಸುನಂದಮ್ಮ,
ತಂದೆ: ಲೇಟ್ ತಿಮ್ಮಯ್ಯ,
ವಯಸ್ಸು 43 ವರ್ಷ.

5. ಮುನಿರಾಜು,
ತಂದೆ: ಲೇಟ್ ನಾರಾಯಣಪ್ಪ,
ವಯಸ್ಸು 38 ವರ್ಷ.

**ಎ 1 ರಿಂದ 5 ರವರ ವಾಸ:**
ಕೋಣದಾಸನಪುರ ವಿಲೇಜ್,
ಬಿದರಹಳ್ಳಿ ಹೋಬಳಿ,
ಬೆಂಗಳೂರು.

**ದೋಷಾರೋಪಣೆ**

ನಾನು, ಶ್ರೀ ಎಂ. ಎಲ್. ರಘುನಾಥ್ ಬಿ.ಎ., ಎಲ್‌ಎಲ್.ಎಮ್, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು, ನಿಮ್ಮ – 1 ರಿಂದ 5ನೇ ಆರೋಪಿತರ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ:

ದಿನಾಂಕ-03.01.2022 ರಂದು ಸುಮಾರು ಸಂಜೆ 5.30ರ ವೇಳೆಗೆ ಪಿರ್ಯಾದಿ ಭಾರತಿ ವಿ, ರವರ ಅತ್ತೆಯು ಕೆಲಸ ಮುಗಿಸಿಕೊಂಡು ಮನೆಗೆ ಬಂದು ನೀರು ಇಲ್ಲದ ಕಾರಣ ನೀರನ್ನು ತರಲು ಸರ್ಕಾರಿ ಕೊಳವೆ ನಲ್ಲಿಯಲ್ಲಿ ನೀರನ್ನು ಹಿಡಿದುಕೊಳ್ಳುವಾಗ ಏಕಾಏಕಿ ಯಾವುದೇ ವಿಚಾರ ಕೇಳದೆ 1 ಮತ್ತು 2ನೇ ಆರೋಪಿಗಳಾದ ನಾಗಮ್ಮ ಮತ್ತು ಕವಿತಾ ಅವರು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದು, ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಿ 149 ರನ್ವಯ ಅಪರಾಧ ಮಾಡಿರುತ್ತೀರಿ.

ಎರಡನೇಯದಾಗಿ, ಮೇಲೆ ಹೇಳಿದ ಸಮಯ, ದಿನಾಂಕ ಹಾಗೂ ಸ್ಥಳದಲ್ಲಿ, 1 ಮತ್ತು 2ನೇ ಆರೋಪಿಗಳಾದ ನೀವು, ಪಿರ್ಯಾದಿ ಭಾರತಿ ವಿ, ಹಾಗೂ ಅವರ ಅತ್ತೆಗೆ ಕಬ್ಬಿಣದ ಸಲಾಕೆಯಿಂದ ತಲೆಗೆ ಹೊಡೆದು ಮಾರಣಾಂತಿಕ ಹಲ್ಲೆ ನಡೆಸಿದ್ದು, ಇದಾದ ನಂತರ 4 ಮತ್ತು 3ನೇ ಆರೋಪಿಗಳಾದ ಸುನಂದಮ್ಮ, ಜಯಮ್ಮ, ಇಬ್ಬರು ಜೊತೆ ಸೇರಿ ಕತ್ತನ್ನು ಹಿಸುಕಿ ಮತ್ತಷ್ಟು ಹಲ್ಲೆ ಮಾಡುವಾಗ ಭಾರತಿ ರವರು ತಮ್ಮ ಅತ್ತೆಯನ್ನು ಕಾಪಾಡಲು ಪ್ರಯತ್ನಿಸಿದಾಗ ಅವರು ಪ್ರಜ್ಞಾಹೀನಳಾದಾಗ ತನಗೆ ಭಯವಾಗಿ ಕಿರಿಚಿದಾಗ ಭಾರತಿ ರವರ ಕತ್ತನು ಹಿಸುಕಿ ಹಲ್ಲೆ ಮಾಡಿದ್ದು, ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಿ 149 ರನ್ವಯ ಅಪರಾಧ ಮಾಡಿರುತ್ತೀರಿ.

ಮೂರನೇಯದಾಗಿ, ಮೇಲೆ ಹೇಳಿದ ಸಮಯ, ದಿನಾಂಕ ಹಾಗೂ ಸ್ಥಳದಲ್ಲಿ, ಪಿರ್ಯಾದಿ ಭಾರತಿ ವಿ, ಹಾಗೂ ಅವರ ಅತ್ತೆಗೆ ಕಬ್ಬಿಣದ ಸಲಾಕೆಯಿಂದ ತಲೆಗೆ

ಹೊಡೆದು ಮಾರಣಾಂತಿಕ ಹಲ್ಲೆ ನಡೆಸಿದ್ದು, ಇದಾದ ನಂತರ 4 ಮತ್ತು 3 ನೇ ಆರೋಪಿಗಳಾದ ಸುನಂದಮ್ಮ, ಜಯಮ್ಮ, ಇಬ್ಬರು ಜೊತೆ ಸೇರಿ ಕತ್ತನ್ನು ಹಿಸುಕಿ ಮತ್ತಷ್ಟು ಹಲ್ಲೆ ಮಾಡಿದ್ದು, 2 ನೇ ಆರೋಪಿಯಾದ ನೀವು ತಮ್ಮ ಕಾಲಿನಿಂದ ಭಾರತಿ ರವರ ಹೊಟ್ಟೆಗೆ ಹೊಡೆದಿದ್ದು, ಎಲ್ಲಾ ಆರೋಪಿಗಳೂ ಜೊತೆ ಸೇರಿ ಭಾರತಿ ಹಾಗೂ ಅವರ ಅತ್ತೆಗೆ ಮಾರಣಾಂತಿಕ ಹಲ್ಲೆ ಮಾಡಿ ಕೊಲೆ ಮಾಡಲು ಪ್ರಯತ್ನ ಮಾಡಿದ್ದು ಭಾರತೀಯ ದಂಡ ಸಂಹಿತೆ ಕಲಂ 307 ಸಹವಾಚಿ 149 ರನ್ವಯ ಅಪರಾಧ ಮಾಡಿರುತ್ತೀರಿ.

ನಾಲ್ಕನೇಯದಾಗಿ, ಮೇಲೆ ಹೇಳಿದ ಸಮಯ, ದಿನಾಂಕ ಹಾಗೂ ಸ್ಥಳದಲ್ಲಿ ಆರೋಪಿಗಳಾದ ನೀವುಗಳು, ಭಾರತಿ ರವರ ಕುತ್ತಿಗೆಯಿಂದ ಒಂದು ಬಂಗಾರದ ಮಾಂಗಲ್ಯದ ಸರ 150 ಗ್ರಾಂ ಹಾಗೂ 50 ಗ್ರಾಂ ಚೈನನ್ನು ಕಿತ್ತುಕೊಂಡಿದ್ದು, ಭಾರತೀಯ ದಂಡ ಸಂಹಿತೆ ಕಲಂ 327 ಸಹವಾಚಿ 149 ರನ್ವಯ ಅಪರಾಧ ಮಾಡಿರುತ್ತೀರಿ.

ಐದನೇಯದಾಗಿ, ಮೇಲೆ ಹೇಳಿದ ಸಮಯ, ದಿನಾಂಕ ಹಾಗೂ ಸ್ಥಳದಲ್ಲಿ ಆರೋಪಿಗಳಾದ ನಿಮಗೆ, 15 ವರ್ಷದಿಂದ ಫಿರ್ಯಾದಿದಾರರು ಹಾಗೂ ಅವರ ಕುಟುಂಬದ ಮೇಲೆ ದ್ವೇಷವಿದ್ದು, 10 ದಿವಸದ ಹಿಂದೆ ತನ್ನ ಗಂಡನಿಗೆ ಮತ್ತು ತನ್ನ ಅತ್ತೆಗೆ ಕೊಲೆ ಬೆದರಿಕೆ-ಜೀವ ಬೆದರಿಕೆ ಹಾಕಿ ದಾರಿಯಲ್ಲಿ ಹೋಗುವಾಗ ಬರುವಾಗ ನಿನ್ನ ಮುಗಿಸುತ್ತೇನೆ ಎಂದು ಹೆದರಿಸಿದ್ದು, ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಿ 149 ರನ್ವಯ ಅಪರಾಧ ಮಾಡಿರುತ್ತೀರಿ.

ಕೊನೇಯದಾಗಿ, ಮೇಲೆ ಹೇಳಿದ ಸಮಯ, ದಿನಾಂಕ ಹಾಗೂ ಸ್ಥಳದಲ್ಲಿ, 5 ನೇ ಆರೋಪಿಯಾದ ನೀವು, 1 ರಿಂದ 4 ನೇ ಆರೋಪಿತರಿಗೆ, ಫಿರ್ಯಾದಿದಾರರು

ಹಾಗೂ ಅವರ ಕುಟುಂಬದ ಮೇಲೆ ಹಲ್ಲೆ ನಡೆಸಲು ಕುಮ್ಮಕ್ಕು ನೀಡಿದ್ದು, ಭಾರತೀಯ ದಂಡ ಸಂಹಿತೆ ಕಲಂ 114 ಸಹವಾಚಿ 149 ರನ್ವಯ ಅಪರಾಧ ಮಾಡಿರುತ್ತೀರಿ.

ಈ ಅಪರಾಧವು ಈ ನ್ಯಾಯಾಲಯದ ಸಂಜ್ಞೆಯೊಳಗೆ ಇದ್ದು ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗತಕ್ಕದ್ದೆಂದು ಈ ಮೂಲಕ ನಿರ್ದೇಶಿಸುತ್ತೇನೆ.

**(ಈ ದಿನ ದಿನಾಂಕ 14 ನೇ ಮಾರ್ಚ್, 2024)**

**(ಎಂ.ಎಲ್. ರಘುನಾಥ್)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.